**C.C.711/2025**
**ಪಿ.ಡಬ್ಲ್ಯು–01–Vimala**

**<u>ಸಾಕ್ಷಿಯನ್ನು ದಿನಾಂಕಃ 23.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ ವಿ ಜಿ ವಕೀಲರಿಂದಃ</u>**

ಕೇರಳದಲ್ಲಿ ನನ್ನ ಗಂಡನಿಗೆ ಜಮೀನು ಇದ್ದು ಅದು ಗದ್ದೆಯಾಗಿದ್ದು ಅಲ್ಲಿ ವಾಸಿಸುವ ಮನೆ ಸಹ ಇರುತ್ತದೆ. ಸದರಿ ಜಮೀನು ನನ್ನ ಮಾವ ಅಂದರೆ ಗಂಡನ ತಂದೆಯ ಹೆಸರಿನಲ್ಲಿ ಇದ್ದಿರುತ್ತದೆ. ನನ್ನ ಗಂಡ ಬದುಕಿದ್ದಾಗ ನಾನು ಅವರ ಜೊತೆ ಮೇಲೆ ಹೇಳಿದ ಮನೆಯಲ್ಲೇ ವಾಸ ಇದ್ದಿರುತ್ತೇನೆ. ನನ್ನ ಗಂಡ ತೀರಿಕೊಂಡ ನಂತರ ಸದರಿ ಜಮೀನು ನನ್ನ ಹೆಸರಿಗೆ ಬದಲಾಗಿರುವುದಿಲ್ಲ. ಸಾಕ್ಷಿ ಮುಂದುವರೆದು ಅದು ಹಿಂದಿನಿಂದಲೂ ನನ್ನ ಮಾವನ ಹೆಸರಿನಲ್ಲಿ ಇದ್ದು ನನ್ನ ಗಂಡನ ತೀರಿಹೋದ ನಂತರ ಅವರ ಸಹೋದರರರು ಜಮೀನನ್ನು ನೋಡಿಕೊಂಡು ಹೋಗುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಅದರ ಸರ್ವೆ ನಂಬರ್ ಅಥವಾ ಖಾತೆ ನಂಬರ್ ಗೊತ್ತಿರುವುದಿಲ್ಲ.

ಆರೋಪಿಯು ಚೆಕ್ ಅನ್ನು ನನಗೆ ನಮ್ಮ ಮನೆಯಲ್ಲಿಯೇ ಬಂದು ಕೊಟ್ಟಿರುತ್ತಾರೆ. ಆರೋಪಿಯು ಸದರಿ ಚೆಕ್ ಅನ್ನು ಕೊಡುವ ಸಮಯದಲ್ಲಿ ನನ್ನ ಮನೆಯಲ್ಲಿ ನಾನು ಒಬ್ಬಳೇ ಇದ್ದಿರುತ್ತೇನೆ. ಆರೋಪಿಯು ಸಹ ಒಬ್ಬರೇ ಬಂದು ಸದರಿ ಚೆಕ್ ಅನ್ನು ನೀಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**